ಸಿ.ಆರ್.ಜಡ್ -2

ಕಡಲ ತೀರದವರೆಗೆ ಈಗಾಗಲೇ ಅಭಿವೃದ್ಧಿ ಹೊಂದಿರುವ ಪ್ರದೇಶಗಳು ಎಂದರೆ, ನಾಮಾಂಕಿತಗೊಂಡಿರುವ ಪಟ್ಟಣ:ನಗರ ಪ್ರದೇಶಗಳು. ಈ ಪ್ರದೇಶಗಳು ಬಹುತೇಕ ನಿರ್ಮಾಣಗೊಂಡಿರಬೇಕು.

ಸಿ.ಆರ್.ಜಡ್-3

ತುಲನಾತ್ಮಕವಾಗಿ ಅಷ್ಟೊಂದು ಅಭಿವೃದ್ಧಿ ಹೊಂದಿರದ ಹಾಗೂ ಮೇಲಿನ ವರ್ಗ -1 ಅಥವ ವರ್ಗ-2 ಕ್ಕೆ ಸೇರಿರದ ಪ್ರದೇಶಗಳು. ಇವು ಗ್ರಾಮಾಂತರ ಪ್ರದೇಶ ಮತ್ತು ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಅಷ್ಟೊಂದು ಅಭಿವೃದ್ಧಿಯಾಗದ ಪ್ರದೇಶಗಳನ್ನು ಒಳಗೊಂಡಿರುತ್ತವೆ.

1978ನೇ ಸಾಲಿಗೂ ಪೂರ್ವದಲ್ಲಿ ಅರಣ್ಯ ಜಮೀನಿನಲ್ಲಿದ್ದ ರೈತರ ವಿವರಗಳು.

2225(1857) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಭ್ರಹ್ಮಾವರ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1978ನೇ ಸಾಲಿಗೆ ಪೂರ್ವದಲ್ಲಿ ಅರಣ್ಯ ಜಮೀನಿನಲ್ಲಿ ವಾಸವಿದ್ದು ಅದನ್ನು ಅಭಿವೃದ್ಧಿ ಪಡಿಸಿದ ರೈತರುಗಳ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೆ? ಹಾಗಿದ್ದಲ್ಲಿ ಅನುಸರಿಸಿದ ಮಾನದಂಡಗಳೇನು?

ಆ) ಹಿಂದೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ತಯಾರಿಸಿದ್ದ ಪಟ್ಟಿಯನ್ನು ಪುನರ್ ಪರಿಶೀಲನೆ ಮಾಡಿ ಸಲ್ಲಿಸುವ ಕ್ರಮವನ್ನು ಸರ್ಕಾರ ಜರುಗಿಸುವುದೇ; ವಿವರ ನೀಡುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಸಲ್ಲಿಸಲಾಗಿತ್ತು.

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂಧರ್ಭದಲ್ಲಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗಿದೆ.

1. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದ ಜನರು, ಭೂ ರಹಿತ ಅರೆ ಕೃಷಿ ಕಾರ್ಮಿಕರು ಮತ್ತು ಜೀವನ ನಿರ್ವಹಣೆಗೆ ಸಾಕಷ್ಟು ಜಮೀನು ಇಲ್ಲದ ವರ್ಗಗಳ ಜನರು ದಿನಾಂಕ 27-4-1978ರ ಪೂರ್ವದಲ್ಲಿ ಅತಿಕ್ರಮಣ ಮಾಡಿದ ಜಮೀನುಗಳನ್ನು ಸಕ್ರಮಗೊಳಿಸಲು ಶಿಫಾರಸ್ಸು ಮಾಡಲಾಗಿದೆ.

2. ಸಕ್ರಮಗೊಳಿಸಬೇಕಾಗಿರುವ ಅತಿಕ್ರಮಣ ಅರಣ್ಯ ಭೂಮಿ ಪ್ರತಿ ಪ್ರಕರಣದಲ್ಲಿ, ರಾಜ್ಯದ ಯಾವುದೇ ಪ್ರದೇಶದಲ್ಲಿ ಅರಣ್ಯದಿಂದ ಹೊರಗಡೆ ಕೂಡ ಭೂಮಿ ಹೊಂದಿದ್ದಲ್ಲಿ, ಅವುಗಳನೆಲ್ಲಾ ಒಟ್ಟು ಸೇರಿಸಿ ಮೂರು ಎಕರೆ (12 ಹೆ.)ಗಿಂತ ಹೆಚ್ಚಿಗೆ ಇಲ್ಲದ ಪ್ರಕರಣಗಳನ್ನು ಮಾತ್ರ ಶಿಫಾರಸ್ಸು ಮಾಡಲಾಗಿದೆ.

ಅ) ಈ ಬಗ್ಗೆ ಸರ್ಕಾರವು ಯಾವುದೇ ನಿರ್ದೇಶನ ನೀಡಿರುವುದಿಲ್ಲ. ದಿನಾಂಕ 27-4-1978ರಿಂದ 24-10-1980ರವರೆಗೆ ಹಾಗೂ ದಿನಾಂಕ: 25-10-1980ರಿಂದ ದಿನಾಂಕ: 30-4-1980ರವರೆಗೆ ನಡೆದಿರುವ ಒತ್ತುವರಿ ಪ್ರಕರಣ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರ್ಕಾರವು ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ರಾಜ್ಯದಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯುವುದು.

2227 (2749) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಕಳೆದ ವರ್ಷ ಮತ್ತು ಪ್ರಸ್ತುತ ವರ್ಷದಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲಾಗಿದೆ; (ವಿವರ ನೀಡುವುದು)

2) ಹೊಸ ಆಸ್ಪತ್ರೆಗಳನ್ನು ತೆರೆಯದಿದ್ದರೆ ಜಾನುವಾರುಗಳ ರೋಗ ತಪಾಸಣೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆಯಾಗುವುದಿಲ್ಲವೇ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಇಲ್ಲ.

2) ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಜಾನುವಾರುಗಳ ರೋಗ ತಪಾಸಣೆ ಬಗ್ಗೆ ಈಗಾಗಲೇ ಇರುವ ಸಂಸ್ಥೆಗಳಲ್ಲಿನ ಪಶುವೈದ್ಯ ನಿಗಾ ವಹಿಸುತ್ತಿರುವುದು.

ಜೋಗ್ ಅನ್ನು ಅಂತರ ರಾಷ್ಟ್ರೀಯ ಪ್ರವಾಸಿತಾಣವನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರದಿಂದ ಬಂದ ಹಣ.

2229 (2726) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಪ್ರವಾಸ್ಯೋದ್ಯಮ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜೋಗ್ ಅನ್ನು ಅಂತರ್ ರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸಲು ಯೋಜನಾ ವರದಿ ಸಿದ್ಧಪಡಿಸಲು ಕೇಂದ್ರ ಸರ್ಕಾರ ರೂ 5.00 ಲಕ್ಷಗಳನ್ನು ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆಯೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು.